# ಸನ್ಮಾನ್ಯ ಮುಖ್ಯಮಂತ್ರಿಗಳೊಡನೆ ಮಕ್ಕಳ ಸಮಾಲೋಚನೆ




**ಪ್ರಶ್ನೆ-1:** ಮಕ್ಕಳ ಹಸಿವು, ಅಪೌಷ್ಟಿಕತೆಯನ್ನು ಹೋಗಲಾಡಿಸಲು ಸರ್ಕಾರ ವಿವಿಧ ಯೋಜನೆಗಳನ್ನು ಜಾರಿಗೆ ತಂದಿದೆ. ಉದಾಹರಣೆಗೆ ಅಕ್ಷರ ದಾಸೋಹ, ಕ್ಷೀರಭಾಗ್ಯ, ಕಬ್ಬಿಣಾಂಶದ ಮಾತ್ರೆಗಳು ಹಾಗು ಶಾಲೆಗಳಲ್ಲಿ ಶುದ್ಧ ನೀರಿನ ವ್ಯವಸ್ಥೆ ಮಾಡಲಾಗಿದೆ.

ಇದಲ್ಲದೆ ಅಪೌಷ್ಟಿಕತೆಯನ್ನು ಹೋಗಲಾಡಿಸಲು ವಿವಿಧ ಯೋಜನೆಗಳು ಗ್ರಾಮಮಟ್ಟದಲ್ಲಿ, ನಗರದ ಬಡವರಿಗಾಗಿ ಜಾರಿಯಾಗಿದೆ. ಹೀಗಿದ್ದರೂ ಸಹ ಮಕ್ಕಳಲ್ಲಿ ಅಪೌಷ್ಟಿಕತೆ ಪದೇ ಪದೇ ಕಂಡುಬರುತ್ತಿದೆ. ಇದಕ್ಕೆ ಅಧಿಕಾರಿಗಳ ನಿರ್ಲಕ್ಷ್ಯ ಕಾರಣವೇ ಅಥವಾ ಸೌಲಭ್ಯಗಳು ಇನ್ನೂ ಸರಿಯಾಗಿ ಜಾರಿಯಾಗದಿರುವುದೇ? ಇದನ್ನು ತಡೆಗಟ್ಟಲು ನೀವು ಯಾವ ಕ್ರಮ ಕೈಗೊಳ್ಳುತ್ತೀರಿ?

(ಅಮೂಲ್ಯ ಆರ್. ನಾಯಕ್, ಭರತ್ ಕುಮಾರ್, ನಿಶ್ಚಲ್, ದೀಕ್ಷಿತಾ ಮತ್ತು ಮೋಯಿನ್)

**ಮುಖ್ಯಮಂತ್ರಿಗಳ ಉತ್ತರ:** ನಿಮ್ಮ ಪ್ರಶ್ನೆಯಲ್ಲೇ ಉತ್ತರ ಕೂಡ ಇದೆ. ಅಪೌಷ್ಟಿಕತೆಯನ್ನು ನಿವಾರಣೆ ಮಾಡಲು ನಮ್ಮ ಸರ್ಕಾರ ಸಾಕಷ್ಟು ಕಾರ್ಯಕ್ರಮಗಳನ್ನು ರೂಪಿಸಿದೆ. ಮಕ್ಕಳಿಗೆ ಬಿಸಿಯೂಟ, ಕ್ಷೀರಭಾಗ್ಯ ಕಾರ್ಯಕ್ರಮ, ಕಬ್ಬಿಣಾಂಶದ ಮಾತ್ರೆಗಳನ್ನು ನೀಡುವ ಮೂಲಕ, ಆರೋಗ್ಯ ತಪಾಸಣೆ ಮಾಡುವ ಕಾರ್ಯಕ್ರಮದ ಮೂಲಕ ಅಪೌಷ್ಟಿಕತೆಯನ್ನು ಕಡಿಮೆ ಮಾಡಲು ಸರ್ಕಾರ ಪ್ರಯತ್ನಿಸುತ್ತಿದೆ. ಆದರೆ ನೂರಕ್ಕೆ ನೂರು ಅಪೌಷ್ಟಿಕತೆ ಹೋಗಿಲ್ಲ ಎನ್ನುವುದು ನಿಜ, ಆದರೆ ಇದರ ಪ್ರಮಾಣ ಬಹಳಷ್ಟು ಕಡಿಮೆಯಾಗುತ್ತಿದೆ. ಇನ್ನು ಕೆಲವೇ ವರ್ಷಗಳಲ್ಲಿ ಸಂಪೂರ್ಣವಾಗಿ ಅಪೌಷ್ಟಿಕತೆಯನ್ನು ನಿವಾರಣೆ ಮಾಡುವಂತಹ ಸಂಪೂರ್ಣ ವಿಶ್ವಾಸ ನನಗೆ ಮತ್ತು ನಮ್ಮ ಸರ್ಕಾರಕ್ಕಿದೆ ಎಂಬುದನ್ನು ನಾನು ಹೇಳಬಯಸುತ್ತೇನೆ. ಇದು ಅಧಿಕಾರಿಗಳ ನಿರ್ಲಕ್ಷ್ಯತೆ ಅಥವಾ ಸರ್ಕಾರದ ನಿರ್ಲಕ್ಷ್ಯ ಎನ್ನುವುದಕ್ಕಿಂತ ಹೆಚ್ಚಾಗಿ ನಮ್ಮಲ್ಲಿ ಬಹಳಷ್ಟು ಅಪೌಷ್ಟಿಕತೆಯಿಂದ ಬಳಲುವ ಮಕ್ಕಳು ಇರುವುದರಿಂದ, ಆ ಮಕ್ಕಳ ಆರೋಗ್ಯದಲ್ಲಿ ಸುಧಾರಣೆಯಾಗಬೇಕಾಗುತ್ತದೆ. ನಮ್ಮ ಅನೇಕ ಕಾರ್ಯಕ್ರಮದಲ್ಲಿ ಬಿಸಿಯೂಟ ಮತ್ತು ಹಾಲು ನೀಡುತ್ತಿರುವುದರಿಂದ ನಮ್ಮ ಆರೋಗ್ಯದಲ್ಲಿ ಸುಧಾರಣೆಯಾಗುತ್ತಿದೆ ಎಂದು ಮಕ್ಕಳು ಹೇಳಿದ್ದಾರೆ. ನಮ್ಮ ಸರ್ಕಾರದಿಂದ ಅನ್ನಭಾಗ್ಯ ಯೋಜನೆಯನ್ನು ಸಹ ಹಮ್ಮಿಕೊಂಡಿದ್ದೇವೆ, ಬಡಕುಟುಂಬಗಳಿಗೆ ಉಚಿತವಾಗಿ ಅಕ್ಕಿ, ಗೋಧಿ ಮತ್ತು ರಾಗಿಯನ್ನು ನೀಡುತ್ತಿದ್ದೇವೆ. ಹಾಗಾಗಿ ಬಡಕುಟುಂಬಗಳ ಮಕ್ಕಳಿಗೂ ಕೂಡ ಮನೆಯಲ್ಲಿ ಹೊಟ್ಟೆತುಂಬಾ ಊಟ ಸಿಗುತ್ತಿದೆ. ಹಾಗಾಗಿ ನಾನು ಈಗಾಗಲೇ ಪ್ರಸ್ತಾಪಿಸಿರುವಂತೆ ಇನ್ನು ಕೆಲವೇ ವರ್ಷಗಳಲ್ಲಿ ನಾವು ಅಪೌಷ್ಟಿಕತೆಯನ್ನು ನಿವಾರಣೆ ಮಾಡುತ್ತೇವೆ.

**ಪ್ರಶ್ನೆ-2:** ಮಕ್ಕಳ ರಕ್ಷಣೆಗಾಗಿ ರಾಜ್ಯದಲ್ಲಿ ಹಲವಾರು ಯೋಜನೆಗಳಿವೆ. ಚೈಲ್ಡ್‌ಲೈನ್ 1098 ಮಕ್ಕಳ ಕಲ್ಯಾಣ ಸಮಿತಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ವಿಶೇಷ ಪೋಲಿಸ್ ಘಟಕ, ರಾಜ್ಯಮಟ್ಟದಲ್ಲಿ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಇವೆಲ್ಲವೂ ಇವೆ. ಇದಕ್ಕೆ ನಮ್ಮೆಲ್ಲರ ಅಭಿನಂದನೆಗಳು.

ಇವೆಲ್ಲಾ ಇದ್ದರೂ ಸಹ ರಾಜ್ಯದಲ್ಲಿ ಮಕ್ಕಳ ಮಾರಾಟ, ಕಳ್ಳಸಾಗಾಣಿಕೆ ನಡೆಯುತ್ತಿದೆ. ಮಕ್ಕಳು ಕಾಣೆಯಾಗುತ್ತಿದ್ದಾರೆ ಹಾಗೂ ಸಾಮಾಜಿಕ ಪಿಡುಗಾದ ದೇವದಾಸಿ ಪದ್ಧತಿ ಇನ್ನೂ ಜಾರಿಯಲ್ಲಿದೆ. ಉದಾ. ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಮರಿಯಮ್ಮನ ಹಳ್ಳಿಯ ಸುತ್ತ-ಮುತ್ತಲಿನ ಗ್ರಾಮದಲ್ಲಿ ದೇವದಾಸಿಯರಿದ್ದಾರೆ. ಇವುಗಳನ್ನು ಸಂಪೂರ್ಣವಾಗಿ ತಡೆಗಟ್ಟಲು ಸರ್ಕಾರ ಕಠಿಣ ಕ್ರಮಗಳ ಜೊತೆಗೆ ಅವರ ಪುನರ್ವಸತಿಗೆ ಕ್ರಮಗಳನ್ನು ಕೈಗೊಳ್ಳಬೇಕೆಂದು ನಾವು ರಾಜ್ಯದ ಮಕ್ಕಳ ಪರವಾಗಿ ಕೇಳಿಕೊಳ್ಳುತ್ತೇವೆ.

(ಸುಮಲತಾ, ಆಶಾ, ಕಾವೇರಿ, ರಾಜಶೇಖರ್, ಭರತ್ ಕುಮಾರ್ ಹೆಚ್.ಆರ್. ಮತ್ತು ಶರಣಮ್ಮ)

**ಮುಖ್ಯಮಂತ್ರಿಗಳ ಉತ್ತರ:** ದೇವದಾಸಿ ಪದ್ಧತಿ ಒಂದು ಅನಿಷ್ಟ ಪದ್ಧತಿ. ಇದು ತೊಲಗಬೇಕು ಎಂಬುದು ನಮ್ಮ ಸರ್ಕಾರದ ಉದ್ದೇಶ, ಅದಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದೇವೆ ಮತ್ತು ಈ ಕುರಿತು ಜನರಲ್ಲೂ ಜಾಗೃತಿ ಮೂಡಬೇಕಾದ ಅವಶ್ಯಕತೆಯಿದೆ. ನಮ್ಮಲ್ಲಿ ಅನೇಕ ಮೂಢನಂಬಿಕೆಗಳಿವೆ, ಮೌಢ್ಯಗಳಿವೆ, ಇವನ್ನು ಮೊದಲು ಹೋಗಲಾಡಿಸಬೇಕು. ಈ ಕುರಿತು ಜನಜಾಗೃತಿ ಉಂಟಾಗಬೇಕು, ಅದಕ್ಕೆ

ಪೂರಕವಾದ ವೈಚಾರಿಕ ಶಿಕ್ಷಣ ದೊರೆಯಬೇಕು, ವೈಜ್ಞಾನಿಕ ಮನೋಭಾವ ಬೆಳೆಸುವಂತಹ ಶಿಕ್ಷಣ ದೊರೆಯಬೇಕು. ಹಾಗಾದಾಗ ಮಾತ್ರ ಇಂತಹ ಅನಿಷ್ಟ ಪದ್ಧತಿಗಳನ್ನು ನಿರ್ಮೂಲನೆ ಮಾಡಬಹುದು. ನಮ್ಮಲ್ಲಿ ಅನೇಕ ಅನಿಷ್ಟ ಪದ್ಧತಿಗಳಿವೆ, ಕಾಡುಗೊಲ್ಲ ಜನಾಂಗದಲ್ಲೂ ಸಹ ಕೆಲವು ಪದ್ಧತಿಗಳು ಇವೆ. ಇಂತಹ ಪದ್ಧತಿಗಳನ್ನು ಮುಂದುವರೆಸಲು ಯಾವುದೇ ವೈಚಾರಿಕವಾದ, ವೈಜ್ಞಾನಿಕವಾದ ಹಿನ್ನೆಲೆ ಇಲ್ಲ. ಇವುಗಳನ್ನು ತೊಡೆದುಹಾಕಬೇಕೆನ್ನುವುದು ಸರ್ಕಾರದ ನಿರ್ಧಾರ. ಈ ನಿಟ್ಟಿನಲ್ಲಿ ದೇವದಾಸಿಯರನ್ನು ಮುಖ್ಯವಾಹಿನಿಗೆ ತರುವುದಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ನಾವು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ.

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರ ಉತ್ತರ:** ದೇವದಾಸಿ ಪದ್ಧತಿಯಿಂದ ನೊಂದಂತಹ ಹೆಣ್ಣುಮಕ್ಕಳು ಮತ್ತು ಸಾಕಷ್ಟು ಸಂಸ್ಥೆಗಳು ಈ ಪದ್ಧತಿಯನ್ನು ತಡೆಗಟ್ಟಲು ಪ್ರಯತ್ನಿಸುತ್ತಿದ್ದಾರೆ. ಮಹಿಳಾ ಅಭಿವೃದ್ಧಿ ನಿಗಮದಲ್ಲೂ ಸಹ ಅನೇಕ ಕಾರ್ಯಕರ್ತೆಯರು ಇದನ್ನು ನಿಯಂತ್ರಣ ಮಾಡಲು ಸದಾಕಾಲ ಶ್ರಮಿಸುತ್ತಿದ್ದಾರೆ. ಯಾವುದೇ ಹೆಣ್ಣುಮಕ್ಕಳನ್ನು ಬಲವಂತವಾಗಿ ದೇವದಾಸಿಯನ್ನಾಗಿ ಮಾಡುತ್ತಿದ್ದಾರೆ ಎಂಬ ಸುದ್ದಿ ತಿಳಿದಾಗ ನಾನು ಸೇರಿದಂತೆ ಅಧಿಕಾರಿಗಳು ಆ ಪ್ರದೇಶಕ್ಕೆ ಹೋಗಿ ಅದನ್ನು ತಡೆಯುವ ಕಾರ್ಯವನ್ನೂ ಮಾಡುತ್ತಿದ್ದೇವೆ. ಮತ್ತು ಆ ಪ್ರದೇಶದ ಮಠಾಧಿಪತಿಗಳನ್ನು, ಸಾಮಾಜಿಕ ಕಾರ್ಯಕರ್ತರನ್ನು ಸೇರಿಸಿಕೊಂಡು ಅಲ್ಲಿರುವ ವ್ಯವಸ್ಥೆಗಳನ್ನು ಬದಲಾವಣೆ ಮಾಡುವ ಪ್ರಯತ್ನಗಳನ್ನು ಕೂಡ ನಾವು ಮಾಡುತ್ತಿದ್ದೇವೆ. ನಮ್ಮ ಸರ್ಕಾರ ಬಂದ ಮೇಲೆ ಕಾಡುಗೊಲ್ಲರ ಮೂಢಪದ್ಧತಿಗಳ ಆಚರಣೆಯೂ ಸಹ ಕಡಿಮೆಯಾಗಿದೆ. ರಾಜ್ಯದ ಗಡಿಭಾಗದ ಕೆಲವು ಸಮುದಾಯಗಳಲ್ಲಿ ಮಕ್ಕಳ ಮಾರಾಟಗಳ ವಿಚಾರವನ್ನು ನಾವು ಅರಿತಿದ್ದೇವೆ. ಇದಕ್ಕೆ ಹೆಣ್ಣುಮಕ್ಕಳ ಮೇಲಿರುವ ನಿರ್ಲಕ್ಷ್ಯವೇ ಕಾರಣ. ಇಂತಹ ಪ್ರಕರಣಗಳು ಕಂಡುಬಂದಾಗ ಪೊಲೀಸ್ ಇಲಾಖೆ ಮತ್ತು ನಮ್ಮ ಇಲಾಖೆ ಜಂಟಿಯಾಗಿ ಕಠಿಣವಾದ ಕ್ರಮಗಳನ್ನು ಕೈಗೊಳ್ಳುತ್ತಿರುವ ಕಾರಣ ಇತ್ತೀಚೆಗೆ ಮಕ್ಕಳ ಮಾರಾಟ ಪ್ರಕರಣಗಳು ಕಡಿಮೆಯಾಗುತ್ತಿವೆ.

**ಪ್ರಶ್ನೆ-3:** ಚೈಲ್ಡ್‌ಲೈನ್ 1098, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಕಲ್ಯಾಣ ಸಮಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಬಾಲ್ಯವಿವಾಹ ನಿಷೇಧ ಕಾಯ್ದೆಯಿಂದ ಇತ್ತೀಚಿನ ದಿನಗಳಲ್ಲಿ ಬಾಲ್ಯವಿವಾಹಗಳು ಕಡಿಮೆಯಾಗಿವೆ. ಇದು ಸಂತೋಷದ ವಿಚಾರವಾಗಿದೆ.

ಆದರೂ ಕೂಡ ಅಲ್ಲಲ್ಲಿ ಕೆಲವೊಂದು ಸಮುದಾಯಗಳಲ್ಲಿ ಬಾಲ್ಯವಿವಾಹದ ಪ್ರಕರಣಗಳು ಕಂಡುಬರುತ್ತಿವೆ. ಇಂತಹ ಪ್ರಕರಣಗಳು ಸಂಪೂರ್ಣ ನಿಲ್ಲಲೇಬೇಕು. ಎಲ್ಲಾ ಮಕ್ಕಳೂ ಶಾಲೆಯಲ್ಲಿ ಕಲಿತು ಭವಿಷ್ಯವನ್ನು ರೂಪಿಸಿಕೊಳ್ಳಲು ಅವಕಾಶ ಆಗಬೇಕು. ಇದಕ್ಕಾಗಿ ನೀವು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು. ಉದಾ: ಬಾಲ್ಯವಿವಾಹವನ್ನು ನಡೆಸುವ ಕುಟುಂಬಕ್ಕೆ ಯಾವುದೇ ಸರ್ಕಾರಿ ಸೌಲಭ್ಯಗಳನ್ನು ನೀಡುವುದಿಲ್ಲ ಎಂದು ಹೇಳಬಹುದಲ್ಲವೇ?
(ಅನುರಾಧ, ಪ್ರದೀಪ, ಅಮೀನಾ, ಹುಸೇನಪ್ಪ ಮತ್ತು ಶರಣಬಸವ).

**ಮುಖ್ಯಮಂತ್ರಿಗಳ ಉತ್ತರ:** ನಿಮ್ಮ ಸಲಹೆ ಚೆನ್ನಾಗಿದೆ. ನಮ್ಮ ರಾಜ್ಯದಲ್ಲಿ ಬಾಲ್ಯ ವಿವಾಹ ನಿಷೇಧ ಕಾಯ್ದೆ ಇದೆ. ಮದುವೆಯಾಗಲು ಹೆಣ್ಣುಮಕ್ಕಳಿಗೆ 18 ವರ್ಷ ಮತ್ತು ಗಂಡುಮಕ್ಕಳಿಗೆ 21 ತುಂಬಿರಲೇಬೇಕು. ಬಾಲ್ಯವಿವಾಹವನ್ನು ತಡೆಗಟ್ಟಬೇಕೆಂಬುದೇ ಸರ್ಕಾರದ ಉದ್ದೇಶ. ಯಾರು ಬಾಲ್ಯವಿವಾಹವನ್ನು ಮಾಡುತ್ತಾರೋ ಅವರ ಪೋಷಕರ ಮೇಲೆ ಪ್ರಕರಣ ದಾಖಲಿಸಿಕೊಳ್ಳುವ ಕೆಲಸ ನಡೆಯುತ್ತಿದೆ. ಇತ್ತೀಚೆಗೆ ಅಲ್ಲಲ್ಲಿ ಬಾಲ್ಯವಿವಾಹ ಪ್ರಕರಣಗಳು ವರದಿಯಾಗಿರುವ ಕಡೆ ಈ ಕ್ರಮ ಕೈಗೊಳ್ಳಲಾಗಿವೆ. ಸಾಮೂಹಿಕ ವಿವಾಹಗಳಲ್ಲೂ ಬಾಲ್ಯವಿವಾಹ ಪ್ರಕರಣಗಳು ಕಂಡುಬರುತ್ತಿರುವುದರಿಂದ, ಸಾಮೂಹಿಕ ವಿವಾಹವನ್ನು ಆಯೋಜಿಸುವವರು ತಹಶೀಲ್ದಾರ್ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಪರವಾನಗಿ ಪಡೆದುಕೊಳ್ಳಬೇಕು. ಈ ರೀತಿ ಪರವಾನಗಿ ಪಡೆದುಕೊಂಡರೆ ಮಾತ್ರ ಸಾಮೂಹಿಕ ವಿವಾಹವನ್ನು ಮಾಡಬಹುದು. ಕೇವಲ ಕಾನೂನಿನಿಂದಲೇ ಎಲ್ಲಾ ಪಿಡುಗುಗಳನ್ನು ನಿಲ್ಲಿಸಲು ಸಾಧ್ಯವಿಲ್ಲ, ಜನರಲ್ಲಿ ಈ ಕುರಿತು ಜಾಗೃತಿ ಮೂಡಬೇಕು ಮತ್ತು ಜನರು ಕೂಡ ಇದಕ್ಕೆ ಸಹಕರಿಸಬೇಕು. ಜನರಿಗೂ ಸಹ ಯಾವುದೇ ಕಾರಣಕ್ಕೂ ನಮ್ಮ ಮಕ್ಕಳಿಗೆ ಬಾಲ್ಯವಿವಾಹ ಮಾಡುವುದಿಲ್ಲ ಎಂಬ ಅರಿವು ಮೂಡಬೇಕಿದೆ. ಹಾಗಾಗಿ ಕಾನೂನಿನ ಜಾರಿ ಮತ್ತು ಜಾಗೃತಿ ಎರಡೂ ಉಂಟಾದಾಗ ಮಾತ್ರ ಸಮಾಜದಲ್ಲಿ ಇಂತಹ ಪಿಡುಗನ್ನು ಸಂಪೂರ್ಣವಾಗಿ ತಡೆಗಟ್ಟಬಹುದು.









**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರ ಉತ್ತರ:** ನಮ್ಮ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬಾಲ್ಯವಿವಾಹವನ್ನು ತಡೆಯಲು ನಿರಂತರವಾಗಿ ಶ್ರಮಿಸುತ್ತಿರುವುದರಿಂದ ರಾಜ್ಯದಲ್ಲಿ ಬಾಲ್ಯವಿವಾಹ ಕಡಿಮೆಯಾಗಿರುವುದು ತುಂಬಾ ಸಂತೋಷದ ವಿಚಾರ. ಬಾಲ್ಯವಿವಾಹ ನಿಷೇಧ ಕಾಯ್ದೆಗೆ ಹೆಚ್ಚು ಬಲವನ್ನು ತುಂಬುವ ಸಲುವಾಗಿ ಇತ್ತೀಚೆಗೆ ಸಂಪುಟ ಸಭೆಯಲ್ಲಿ ಕಾಯ್ದೆಯ ನಿಯಮದಲ್ಲಿ ತಿದ್ದುಪಡಿಗಳನ್ನು ಮಾಡಿದ್ದೇವೆ ಮತ್ತು ಅಧಿಕಾರಿಗಳಿಗೆ ಹೆಚ್ಚು ಜವಾಬ್ದಾರಿಯನ್ನು ನೀಡಲಾಗಿದೆ. ಶಿಕ್ಷಣ ಇಲಾಖೆ, ಪೊಲೀಸ್, ಸಮಾಜ ಕಲ್ಯಾಣ ಇಲಾಖೆಗಳ ಅಧಿಕಾರಿಗಳು ಮತ್ತು ತಹಶೀಲ್ದಾರ್ ಇವರನ್ನು ಒಳಗೊಂಡ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಬಾಲ್ಯವಿವಾಹ ಪ್ರಕರಣಗಳು ಕಂಡುಬಂದಲ್ಲಿ ಕಠಿಣ ಕ್ರಮಗಳನ್ನು ಕೈಗೊಳ್ಳುವ ಜವಾಬ್ದಾರಿಯನ್ನು ವಹಿಸಲಾಗಿದೆ.

**ಪ್ರಶ್ನೆ-4:** ರಾಜ್ಯದಲ್ಲಿ ಮಕ್ಕಳ ಮೇಲಾಗುತ್ತಿರುವ ಲೈಂಗಿಕ ದೌರ್ಜನ್ಯಗಳನ್ನು ತಡೆಗಟ್ಟಲು ಸರ್ಕಾರ ಪಾಕ್ಸೋ ಕಾಯ್ದೆಯನ್ನು ಜಾರಿಗೆ ತಂದಿರುವುದು ತುಂಬಾ ಸಂತೋಷದ ವಿಷಯ.

ಆದರೂ ಸಹ ಹೆಣ್ಣುಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಗಳ ಪ್ರಕರಣಗಳು ವರದಿಯಾಗುತ್ತಲೇ ಇವೆ. ಇದನ್ನು ಸಂಪೂರ್ಣವಾಗಿ ತಡೆಗಟ್ಟಲು ಸರ್ಕಾರ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕು ಮತ್ತು ಇಂತಹ ಪ್ರಕರಣಗಳಲ್ಲಿ ಭಾಗಿಯಾದವರ ವಿವರವನ್ನು ಗೌಪ್ಯವಾಗಿಡಲು ಕ್ರಮ ಕೈಗೊಳ್ಳಬೇಕೆಂದು ನಾವು ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇವೆ.

(ಪ್ರಜ್ವಲ್ ರಾವ್, ಮಹೇಶ್, ರೀಯಾ, ಸಂಗೀತ ಮತ್ತು ಸುಮಂಗಲ)

**ಮುಖ್ಯಮಂತ್ರಿಗಳ ಉತ್ತರ:** ಈಗಾಗಲೇ ನೀವು ಹೇಳಿದಂತೆ ಪಾಕ್ಸೋ ಕಾಯ್ದೆಯನ್ನು ನಾವು 2012ರಲ್ಲಿ ಜಾರಿಗೆ ತಂದಿದ್ದೇವೆ ಮತ್ತು ಅದಕ್ಕೆ ನಿಯಮಗಳನ್ನು ರೂಪಿಸಿದ್ದೇವೆ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ನಾಗರೀಕ ಸಮಾಜ ತಲೆತಗ್ಗಿಸುವಂತಹ ವಿಚಾರ. ಈ ರೀತಿಯ ದೌರ್ಜನ್ಯ ಎಸಗುವವರು ಮನುಷ್ಯರಲ್ಲ, ಪ್ರಾಣಿಗಳಿಗಿಂತ ಹೀನರು ಎಂದೇ ನನ್ನ ಭಾವನೆ. ಸಹಜ ಮನುಷ್ಯರು ಅಥವಾ ಮನುಷ್ಯತ್ವ ಇರುವವರು ಯಾರೂ ಇಂತಹ ದೌರ್ಜನ್ಯ ಎಸಗುವುದಿಲ್ಲ. ಇಂತಹ ಕೃತ್ಯವನ್ನು ಇಡೀ ಸಮಾಜ ಒಕ್ಕೊರಲಿನಿಂದ ಖಂಡಿಸಬೇಕು. ನಾವು ಬಹಳ ಕಠಿಣವಾದ ಕಾಯ್ದೆಯನ್ನು ಜಾರಿಗೆ ತಂದಿದ್ದೇವೆ ಮತ್ತು ಇದಕ್ಕೆ ಬಲಿಯಾದ ಮಕ್ಕಳ ಹೆಸರುಗಳನ್ನು ಗೌಪ್ಯವಾಗಿಡಬೇಕೆಂದು ಕಾಯ್ದೆಯಲ್ಲೇ ಹೇಳಿದೆ. ಪಾಕ್ಸೋ ಕಾಯ್ದೆ ಬಹಳ ಕಠಿಣವಾದ ಕಾಯ್ದೆ. ಭಾರತೀಯ ದಂಡ ಸಂಹಿತೆಯಲ್ಲಿಯೂ ಸಹ ಅತ್ಯಾಚಾರಕ್ಕೆ ಬಹಳ ಕಠಿಣವಾದ ಶಿಕ್ಷೆಯಿದೆ ಮತ್ತು ಅದಕ್ಕೆ ಇತ್ತೀಚೆಗೆ ತಿದ್ದುಪಡಿ ಸಹ ಮಾಡಿದ್ದೇವೆ. ಆದರೂ ಸಹ ಅಲ್ಲಲ್ಲಿ ಈ ರೀತಿಯ ದೌರ್ಜನ್ಯಗಳು ನಡೆಯುತ್ತಿವೆ. ಇದನ್ನು ತಡೆಯುವಲ್ಲಿ ಸಮಾಜ, ಶಿಕ್ಷಣ ಸಂಸ್ಥೆಗಳು, ಪೋಷಕರು ಜವಾಬ್ದಾರಿ ಹೆಚ್ಚಿದೆ ಮತ್ತು ಅಂತಹ ವಾತಾವರಣವನ್ನು ನಿರ್ಮಾಣ ಮಾಡಬೇಕಿದೆ. ಇಂತಹ ಪ್ರಕರಣಗಳ ವಿಚಾರಣೆಗೆ ನಾವು ವಿಶೇಷ ನ್ಯಾಯಾಲಯವನ್ನು ಸ್ಥಾಪನೆ ಮಾಡಿದ್ದೇವೆ. ಮತ್ತು ಇತ್ತೀಚೆಗೆ ಈ ಕುರಿತು ಒಂದು ಸಮಿತಿಯನ್ನೂ ಸಹ ರಚನೆ ಮಾಡಿದ್ದೇವೆ ಪ್ರಸ್ತುತ ಶ್ರೀಯುತ ಉಗ್ರಪ್ಪನವರು ಸಮಿತಿಯ ಅಧ್ಯಕ್ಷರಾಗಿದ್ದಾರೆ. ಸಮಿತಿಯು ಎಲ್ಲಾ ಕಡೆ ಸಾರ್ವಜನಿಕರ, ತಜ್ಞರ ಮತ್ತು ಕಾನೂನಿನ ಅಭಿಪ್ರಾಯಗಳನ್ನು ಪಡೆಯುತ್ತಿದೆ. ಅವರು ಅಂತಿಮ ವರದಿಯನ್ನು ಸರ್ಕಾರಕ್ಕೆ ನೀಡಿದ ಮೇಲೆ ಅದರಲ್ಲಿರುವ ಶಿಫಾರಸ್ಸುಗಳನ್ನು ಅತ್ಯಂತ ಕಟ್ಟುನಿಟ್ಟಾಗಿ ಸರ್ಕಾರ ಜಾರಿ ಮಾಡಲಿದೆ. ನಮ್ಮ ಅಂತಿಮ ಉದ್ದೇಶವೂ ಸಹ ಮಕ್ಕಳ ಮೇಲೆ ನಡೆಯುವ ಇಂತಹ ದೌರ್ಜನ್ಯವನ್ನು ನಿಲ್ಲಿಸುವುದೇ ಆಗಿದೆ ಮತ್ತು ಆ ನಿಟ್ಟಿನಲ್ಲಿ ನಾವು ಕಾರ್ಯೋನ್ಮುಖರಾಗಿದ್ದೇವೆ ಎಂದು ಹೇಳಬಯಸುತ್ತೇನೆ.

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರ ಉತ್ತರ:** ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಇಂತಹ ಪ್ರಕರಣಗಳಲ್ಲಿ ವೈದ್ಯಕೀಯ ವರದಿ, ಪೊಲೀಸ್ ವರದಿಗಳನ್ನು ತಿರುಚುವ ಅಧಿಕಾರಿಗಳ ಮೇಲೆ ಕಠಿಣ ಕ್ರಮ ಕೈಗೊಂಡಿದ್ದೇವೆ ಹಾಗು ಅವರನ್ನು ಅಮಾನತು ಕೂಡ ಮಾಡಲಾಗಿದೆ. ಇಂತಹ ಪ್ರಕರಣಗಳು ನಡೆದಾಗ ನಮ್ಮ ಇಲಾಖೆಯು ಪ್ರಕರಣದ ಯಾವುದೇ ಸಾಕ್ಷಿ ನಾಶ ಆಗದ ಹಾಗೆ ನೋಡಿಕೊಳ್ಳುತ್ತಿದೆ ಮತ್ತು ದೌರ್ಜನ್ಯಕ್ಕೊಳಗಾದವರಿಗೆ ನೆರವು ನೀಡುವ ಕಾರ್ಯವನ್ನೂ ಸಹ ಮಾಡುತ್ತಿದ್ದೇವೆ ಮತ್ತು ಅಪರಾಧಿಗಳಿಗೆ ಕಠಿಣ ಶಿಕ್ಷೆ ಆಗುವಂತೆ ಮಾಡಲು ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ. ಮಕ್ಕಳ ಸುರಕ್ಷಿತ ಶಿಕ್ಷಣ ನೀತಿಯನ್ನೂ ಸಹ ಜಾರಿಗೆ ತರಲು ನಾವು ಮುಂದಾಗಿದ್ದೇವೆ ಮತ್ತು ಸಧ್ಯದಲ್ಲೇ ಆ ಕುರಿತು ಸಾರ್ವಜನಿಕ ಅಭಿಪ್ರಾಯವನ್ನು ಪಡೆಯಲಿದ್ದೇವೆ, ಆ ಸಭೆಗೆ ತಾವುಗಳು ಆಗಮಿಸಿ ತಮ್ಮ ಅಭಿಪ್ರಾಯವನ್ನು ಹಂಚಿಕೊಳ್ಳಲು ನಾನು ನಿಮಗೆ ಆಹ್ವಾನ ನೀಡುತ್ತಿದ್ದೇನೆ.

(ಈ ಸಮಾಲೋಚನೆ 2015 ನವೆಂಬರ್ 27ರಂದು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿರುವ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆಯಿತು)

ಪ್ರಶ್ನೆ-5: ಸರ್ಕಾರ ಹೆಣ್ಣುಮಕ್ಕಳಿಗಾಗಿ ಹಲವಾರು ಯೋಜನೆಗಳನ್ನು ಕೈಗೊಂಡಿರುವುದರಿಂದ ಕಳೆದ ದಶಕಕ್ಕೆ ಹೋಲಿಸಿದರೆ ೦-6 ವರ್ಷದ ಲಿಂಗಪ್ರಮಾಣದಲ್ಲಿ ತುಸು ಹೆಚ್ಚಳವಾಗಿದೆ. ಇದು ತುಂಬಾ ಸಂತೋಷದ ವಿಚಾರ.

ಆದರೂ ಸಹ ಅನೇಕ ರಾಜ್ಯಗಳಿಗೆ ಹೋಲಿಸಿದರೆ ಇದು ತೀರಾ ಕಡಿಮೆ. ಇದಕ್ಕೆ ಮುಖ್ಯ ಕಾರಣ ಸ್ಕ್ಯಾನಿಂಗ್ ಕೇಂದ್ರಗಳು ಮತ್ತು ಹೆಣ್ಣು ಭ್ರೂಣ ಹತ್ಯೆ. ಈಗ ಯಾರೂ ರಾಜಾರೋಷವಾಗಿ ಸ್ಕ್ಯಾನಿಂಗ್ ಮಾಡುವುದಿಲ್ಲ ಎಂದರೂ ಗುಪ್ತವಾಗಿ ಲಿಂಗ ಪತ್ತೆ ಮಾಡುವ ಸ್ಕ್ಯಾನಿಂಗ್ ಕೇಂದ್ರಗಳು ಇವೆ. ಇವುಗಳ ಮೇಲೆ ಸರ್ಕಾರ ಕಠಿಣ ಕ್ರಮ ಕೈಗೊಳ್ಳಲು ಯಾಕೆ ಹಿಂಜರಿಯುತ್ತಿದೆ?

(ವೈಷ್ಣವಿ, ಯಶಸ್ವಿ ಭವಾನಿ, ಜೈರಾಜ್, ಕಿರಣ ಮತ್ತು ಸುಶ್ಮಿತಾ).

ಮುಖ್ಯಮಂತ್ರಿಗಳ ಉತ್ತರ: ಇಂತಹವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಲು ಸರ್ಕಾರ ಯಾವುದೇ ಕಾರಣಕ್ಕೂ ಹಿಂಜರಿಯುವುದಿಲ್ಲ. (ಭ್ರೂಣಹತ್ಯೆಗೆ ಗುರಿಯಾಗುವವರು ಹೆಂಗಸರು) ಆದ್ದರಿಂದ ಅವರಲ್ಲಿ ಜಾಗೃತಿ ಮೂಡಬೇಕು ಮತ್ತು ಪುರುಷರಲ್ಲೂ ಈ ಕುರಿತು ಜಾಗೃತಿ ಮೂಡಬೇಕು. ಈ ಕುರಿತು ಕಾಯ್ದೆಯಿದ್ದರೂ ಸಹ ಇದರ ಅಡಿಯಲ್ಲಿ ಯಾರಿಗೂ ಈವರೆಗೆ ಶಿಕ್ಷೆಯಾಗಿಲ್ಲ ಏಕೆಂದರೆ ದೂರು ಕೊಡಬೇಕಾದ ಪೋಷಕರೇ ಭ್ರೂಣಹತ್ಯೆಯಲ್ಲಿ ಭಾಗಿಯಾಗಿರುತ್ತಾರೆ, ಹಾಗಾಗಿ ಸಾಕ್ಷಿಗಳು ಸಿಗುವುದಿಲ್ಲ. ಕಾನೂನು ಇಂತಹ ಪ್ರಕರಣಗಳಲ್ಲಿ ನಿರ್ವಿವಾದವಾದ ಸಾಕ್ಷಿಗಳನ್ನು ಪರಿಗಣಿಸುತ್ತದೆ. ಹಾಗಾಗಿ ತಪ್ಪಿತಸ್ಥರು ಅನುಮಾನದ ಉಪಯೋಗವನ್ನು ಪಡೆದುಕೊಂಡು ಪಾರಾಗಿಬಿಡುತ್ತಾರೆ. ಈ ಕುರಿತು ನಾವು ಎಲ್ಲಾ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಪ್ರಶ್ನೆ-6: ಸರ್ಕಾರವು ಕೆಲವು ಶಾಲೆಗಳಲ್ಲಿ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ, ಬಿಸಿಯೂಟ, ಸಮಾನತೆಗಾಗಿ ಸಮವಸ್ತ್ರ, ಬಸ್ ಪಾಸ್, ವಿದ್ಯಾರ್ಥಿ ವೇತನ, ಹೆಣ್ಣು ಮಕ್ಕಳು ಆರೋಗ್ಯದಿಂದಿರಲು ನ್ಯಾಪ್ಕಿನ್ ಮುಂತಾದ ರೀತಿಯ ಸೌಕರ್ಯವನ್ನು ಕಲ್ಪಿಸಿರುವುದು ಬಹಳ ಸಂತೋಷ.

ಆದರೆ ಶಾಲೆಯೆಂದರೆ ನಾವು ಖುಷಿಯಿಂದ, ಪ್ರೀತಿಯಿಂದ ಹೋಗಬೇಕಾದ ಕಲಿಯುವ ಸ್ಥಳ. ಆದರೆ ನಮ್ಮ ಗೆಳೆಯರ ಗುಂಪು ಹಂಚಿಕೊಂಡಂತೆ ಸಾಕಷ್ಟು ಶಾಲೆಗಳಲ್ಲಿ ಮುಖ್ಯವಾದ ಶಾಲಾ ಸೌಲಭ್ಯಗಳು ಹೆಸರಿಗೆ ಮಾತ್ರವಿದೆ. ಅಂದರೆ ಉತ್ತಮ ಶೌಚಾಲಯ, ಕುಡಿಯುವ ನೀರು, ವಿದ್ಯುತ್, ಆಟದ ಮೈದಾನ, ಸುಸಜ್ಜಿತ ಕೊಠಡಿ, ಆಟದ ಸಲಕರಣೆಗಳು, ಪ್ರಯೋಗಶಾಲೆ, ಎಲ್ಲಾ ವಿಷಯಗಳಿಗೆ ಪ್ರತ್ಯೇಕ ಶಿಕ್ಷಕರು, ಸಾರಿಗೆ, ಉಚಿತ ಪ್ರವಾಸ, ಕಂಪ್ಯೂಟರ್ ಶಿಕ್ಷಣ, ಗ್ರಂಥಾಲಯ ಇಂತಹ ಸೌಲಭ್ಯಗಳಿರುವ ಶಾಲೆಗಳು ಪ್ರತೀ ಪಂಚಾಯ್ತಿಗೆ ಏಕೆ ನೀವು ತೆರೆಯಬಾರದು? ಆಗ ಮಕ್ಕಳ ಎಲ್ಲಾ ಸಮಸ್ಯೆಗಳನ್ನು ಶಾಲೆಯ ಮೂಲಕ ಪರಿಹರಿಸಲು ಖಂಡಿತ ಸಾಧ್ಯವಲ್ಲವೆ?

(ಶ್ರೀವಾಣಿ, ರಶ್ಮಿ, ನವರಾಜ್, ಪ್ರಭಾವತಿ, ಕೀರ್ತಿ ಮತ್ತು ಕೃತಿಕ)

ಮುಖ್ಯಮಂತ್ರಿಗಳ ಉತ್ತರ: ಶಾಲೆಗಳಲ್ಲಿ ಇನ್ನೂ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡಲಾಗಿಲ್ಲ ಎನ್ನುವುದು ನಿಜ. ಅನೇಕ ಶಾಲೆಗಳಲ್ಲಿ ಆಟದ ಮೈದಾನ, ಪ್ರಯೋಗಾಲಯ, ಶೌಚಾಲಯ ಇವೇ ಮೊದಲಾದ ಸೌಲಭ್ಯಗಳಿಲ್ಲದಿರುವುದು ಸತ್ಯ. ಆದರೆ ಹಂತ ಹಂತವಾಗಿ ಈ ಸೌಲಭ್ಯಗಳನ್ನು ಒದಗಿಸಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಈಗ ಶಾಲೆಗಳಲ್ಲಿ ಸ್ಮಾರ್ಟ್ ಕ್ಲಾಸ್‌ಗಳನ್ನೂ ಸಹ ನಡೆಸುತ್ತಿದ್ದೇವೆ ಹಾಗು ಗ್ರಾಮೀಣ ಭಾಗಗಳಲ್ಲಿ ಹೆಚ್ಚು ಒತ್ತು ನೀಡುತ್ತಿದ್ದೇವೆ. ಶಾಲೆಗಳಲ್ಲಿ ಶೌಚಾಲಯಗಳು ಕಡ್ಡಾಯವಾಗಿ ಇರಲೇಬೇಕೆಂದು ನಿರ್ಧಾರ ಮಾಡಿದ್ದೇವೆ

ಏಕೆಂದರೆ ಮಕ್ಕಳಿಗೆ ಅದರಲ್ಲೂ ಹೆಣ್ಣುಮಕ್ಕಳಿಗೆ ಅದರಿಂದ ಆಗುವ ತೊಂದರೆಗಳ ಬಗ್ಗೆ ನಮಗೆ ಅರಿವಿದೆ. ಕರ್ನಾಟಕ ಸರ್ಕಾರ ಶೌಚಾಲಯಕ್ಕೆ ಹೆಚ್ಚು ಒತ್ತು ಕೊಟ್ಟಿದೆ. ಸಮಾಜವೂ ಸಹ ಈ ಕುರಿತು ಗಮನ ನೀಡಬೇಕು. ಶಾಲೆಯಲ್ಲಿ ಓದಿ ವಿವಿಧ ಉದ್ಯೋಗದಲ್ಲಿರುವವರು ತಾವು ಓದಿದ ಶಾಲೆಗೆ ಮೂಲಸೌಲಭ್ಯಗಳನ್ನು ಒದಗಿಸಲು ನೆರವಾಗಬೇಕು. ಸಮಾಜದ ಸಹಭಾಗಿತ್ವವಿಲ್ಲದೆ ಸರ್ಕಾರ ಒಮ್ಮೆಲೇ ಎಲ್ಲಾ ಸವಲತ್ತುಗಳನ್ನು ಒದಗಿಸಿಕೊಡಲು ಸಾಧ್ಯವಿಲ್ಲ. ರಾಜ್ಯದ ಹಣಕಾಸಿನ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಅದರ ಲಭ್ಯತೆ ಮೇರೆಗೆ ಸೌಕರ್ಯಗಳನ್ನು ಒದಗಿಸಿಕೊಡಲು ನಾವು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಹಿಂದಿನ ಕಾಲಕ್ಕೆ ಹೋಲಿಸಿದರೆ ಈಗ ಶಾಲೆಗಳಲ್ಲಿ ಮಕ್ಕಳಿಗೆ ಹೆಚ್ಚು ಸೌಲಭ್ಯಗಳು ದೊರೆಯುತ್ತಿವೆ ಮತ್ತು ಈ ವರ್ಷದಿಂದ ಎಲ್ಲಾ ಮಕ್ಕಳಿಗೆ ಒಂದು ಜೊತೆ ಶೂ ಮತ್ತು ಎರಡು ಜೊತೆ ಸಾಕ್ಸ್‌ಗಳನ್ನು ನೀಡಬೇಕೆಂದು ತೀರ್ಮಾನ ಮಾಡಿದ್ದೇವೆ. ಎಲ್ಲಾ ಶಾಲೆಗಳಿಗೂ ಎಲ್ಲಾ ಸೌಲಭ್ಯಗಳನ್ನು ಹಂತಹಂತವಾಗಿ ಒದಗಿಸಲಿದ್ದೇವೆ.










**ಪ್ರಶ್ನೆ-7:** ಸರ್ವಶಿಕ್ಷಣ ಅಭಿಯಾನ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಮತ್ತು ಗೃಹಾಧಾರಿತ ಶಿಕ್ಷಣಗಳ ಮೂಲಕ ಅಂಗವಿಕಲ ಮಕ್ಕಳಿಗೆ ಸರ್ಕಾರ ಹೆಚ್ಚಿನ ಆದ್ಯತೆ ನೀಡಿದೆ. ಹಾಗೆಯೇ ಅವರ ಆರೋಗ್ಯದ ದೃಷ್ಟಿಯಿಂದ ವಿಶೇಷ ಸೌಲಭ್ಯಗಳನ್ನು ಸರ್ಕಾರ ಒದಗಿಸುತ್ತಿದೆ.

ಸಮನ್ವಯ ಶಿಕ್ಷಣ ಹಾಗು ಶಾಲೆಗಳಲ್ಲಿ ಅಂಗವಿಕಲ ಮಕ್ಕಳ ರಕ್ಷಣೆಗಾಗಿ ಅಂಗವಿಕಲ ಮಕ್ಕಳ ಸ್ನೇಹಿ ವಾತಾವರಣ ನಿರ್ಮಿಸಲು ಯಾವ ಕ್ರಮಗಳನ್ನು ಕೈಗೊಂಡಿದ್ದೀರಾ? ಮನೆ, ಸಮುದಾಯ, ವಸತಿ ಶಾಲೆಗಳಲ್ಲಿ ಬುದ್ಧಿಮಾಂದ್ಯ, ಕಣ್ಣುಕಾಣದ ಮಕ್ಕಳು, ಮಾತು ಮತ್ತು ಶ್ರವಣದೋಷ ಇರುವ ಮಕ್ಕಳ ಮೇಲೆ ದೌರ್ಜನ್ಯ ಹೆಚ್ಚಾಗುತ್ತಿದೆ. ಇದನ್ನು ತಡೆಗಟ್ಟಲು ನೀವು ಕೈಗೊಳ್ಳುವ ಕ್ರಮಗಳೇನು?

(ರಂಜಿತ, ದೀಪ್ತಿ, ಕೆಂಪರಾಜು, ಮೋಹನ್ ಗೋಪಾಲ, ಸುಶ್ಮಿತ, ಶ್ರೀಕಾಂತ್, ನೇಹಾ ಮತ್ತು ಪ್ರದೀಪ್).

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರ ಉತ್ತರ:** ಮಕ್ಕಳೆಂದರೆ ದೇವರಿದ್ದಂತೆ, ಅಂಗವಿಕಲ ಮಕ್ಕಳೂ ಸಹ ಅದರಲ್ಲಿ ಸೇರಿದ್ದಾರೆ. ಮಕ್ಕಳಿಗೆ ಸಿಗಬೇಕಾದ ಎಲ್ಲಾ ಹಕ್ಕುಗಳನ್ನು ಅಂಗವಿಕಲ ಮಕ್ಕಳೂ ಪಡೆದುಕೊಳ್ಳಬೇಕು ಮತ್ತು ಸರ್ಕಾರ ಅದನ್ನು ಒದಗಿಸಬೇಕು ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅಂಗವಿಕಲರಿಗೆ ಸಂಬಂಧಪಟ್ಟ ಹಾಗೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ರ್‍ಯಾಂಪ್‌ಗಳನ್ನು ಹಾಕಲು ಮತ್ತು ಶೌಚಾಲಯವನ್ನು ನಿರ್ಮಿಸಲು ನಾವು ಸುತ್ತೋಲೆಯನ್ನು ಕಳುಹಿಸಿದ್ದೇವೆ. ರ್‍ಯಾಂಪ್‌ಗಳನ್ನು ಅಲ್ಲಲ್ಲಿ ಹಾಕಲಾಗುತ್ತಿದೆ. ಆದರೆ ಸಂಪೂರ್ಣವಾಗಿ ಹಾಕಲು ಇನ್ನೂ ಸಾಧ್ಯವಾಗಿಲ್ಲ, ಇದನ್ನು ಹಂತಹಂತವಾಗಿ ಮಾಡುವ ಪ್ರಯತ್ನಗಳು ನಡೆಯುತ್ತಿವೆ. ಸರ್ಕಾರಿ ಶಾಲೆಗಳಲ್ಲಿ ಮತ್ತು ಸರ್ಕಾರಿ ಕಛೇರಿಗಳಲ್ಲಿ ರ್‍ಯಾಂಪ್‌ಗಳನ್ನು ಕಡ್ಡಾಯವಾಗಿ ನಿರ್ಮಾಣ ಮಾಡುವ ನಿರ್ಧಾರ ಸರ್ಕಾರಕ್ಕಿದೆ. ನಮ್ಮ ಸರ್ಕಾರ ಜಾರಿಗೆ ಬಂದ ನಂತರ ಅಂಗವಿಕಲ ಮಕ್ಕಳಿಗೆ ಸ್ಯಾಟಲೈಟ್ ಶಿಕ್ಷಣ ಒದಗಿಸುವ ಸಲುವಾಗಿ ಆಯವ್ಯಯದಲ್ಲಿ ಘೋಷಣೆ ಮಾಡಿದ್ದೇವೆ ಇದನ್ನು ಶೀಘ್ರದಲ್ಲೇ ಜಾರಿಗೆ ತರುತ್ತೇವೆ. 1,000 ಅಂಧಮಕ್ಕಳಿಗೆ ನಾವು ಟಾಕಿಂಗ್ ಲ್ಯಾಪ್‌ಟಾಪ್‌ಗಳನ್ನು ನೀಡಲಿದ್ದೇವೆ. ಜೊತೆಗೆ ಅಂಗವಿಕಲ ಮಕ್ಕಳಿಗೆ ಇರುವ ವಿದ್ಯಾರ್ಥಿವೇತನವನ್ನು ಈಗ ಮೂರು ಪಟ್ಟು ಹೆಚ್ಚಿಸಲಾಗಿದೆ ಎಂದು ಹೇಳಲು ನನಗೆ ಸಂತೋಷವಾಗುತ್ತದೆ. ವಿಕಲಚೇತನರಿಗೆ ಸಿಗಬೇಕಾದ ಸೌಲಭ್ಯಗಳನ್ನು ಅವರ ಮನೆಗಳಿಗೆ ತಲುಪಿಸುವ ಕೆಲಸ ಮಾಡುತ್ತಿರುವ ಗ್ರಾಮೀಣ ವಿಕಲಚೇತನ ಪುನರ್ವಸತಿ ತಂಡಗಳಿಗೆ ನೀಡುವ ಗೌರವಧನವನ್ನೂ ಸಹ ನಾವು ಹೆಚ್ಚಿಸಿದ್ದೇವೆ. ಇನ್ನು ಮೂರು ತಿಂಗಳಲ್ಲಿ ನಮ್ಮ ಇಲಾಖೆಯ ಜಿಲ್ಲಾ ಕಛೇರಿಯಲ್ಲಿ ಅಂಗವಿಕಲರಿಗಾಗಿ ಮಾಹಿತಿ ಕೇಂದ್ರವನ್ನು ತೆರೆಯಲಿದ್ದೇವೆ, ಅಲ್ಲಿ ಅಂಗವಿಕಲರಿಗೆ ಯಾವ್ಯಾವ ಇಲಾಖೆಯಲ್ಲಿ ಯಾವ್ಯಾವ ಸೌಲಭ್ಯಗಳು ದೊರೆಯುತ್ತದೆಂಬ ಸಂಪೂರ್ಣ ಮಾಹಿತಿ ನೀಡಲಾಗುತ್ತದೆ. ಯಾವುದೇ ಅಂಧ ಮಹಿಳೆಯು ಮಕ್ಕಳನ್ನು ಹಡೆದರೆ, ಆ ಮಕ್ಕಳ ಪಾಲನೆ ಪೋಷಣೆಗೆ ಪ್ರತಿ ತಿಂಗಳೂ 2,000 ರೂಗಳನ್ನು ಎರಡು ವರ್ಷದವರೆಗೆ ನೀಡಲಾಗುತ್ತದೆ. ಇಡೀ ದೇಶದಲ್ಲೇ ವಿಕಲಚೇತನ ಮಕ್ಕಳಿಗೆ ಹೆಚ್ಚಿನ ಸೌಲಭ್ಯವನ್ನು ನಮ್ಮ ರಾಜ್ಯ ಒದಗಿಸಿದೆ.

**ಪ್ರಶ್ನೆ-8:** ರಾಜ್ಯ ಸರ್ಕಾರವು ಶಾಲಾ ಕಾಲೇಜುಗಳ ಆವರಣದ 100 ಮೀಟರ್ ಒಳಗೆ ಯಾವುದೇ ಮಾದಕ ವಸ್ತುಗಳನ್ನು ಮಾರುವುದನ್ನು ನಿಷೇಧಿಸಿ ಆದೇಶ ಹೊರಡಿಸಿದೆ. ಇದರಿಂದ ಶಾಲೆಯಲ್ಲಿ ಉತ್ತಮ ವಾತಾವರಣ ಸೃಷ್ಟಿಸಬಹುದು. ಯಾವುದೇ ಅಂಗಡಿಗಳಲ್ಲಿ ಮಕ್ಕಳಿಗೆ 18 ವರ್ಷ ತುಂಬದೆ ತಂಬಾಕು ಉತ್ಪನ್ನ ಹಾಗು ಮದ್ಯವನ್ನು ಕೊಡಬಾರದೆಂಬ ಆದೇಶವನ್ನೂ ಸಹ ನೀಡಿದೆ. ಇದಕ್ಕೆ ನಾವು ರಾಜ್ಯ ಸರ್ಕಾರವನ್ನು ಅಭಿನಂದಿಸುತ್ತೇವೆ.

ಆದರೆ ಎಲ್ಲ ಕಡೆಗಳಲ್ಲಿಯೂ ಸಹ ಇದು ಚಾಲ್ತಿಯಲ್ಲಿ ಇದ್ದಿದ್ದರೆ ಕರ್ನಾಟಕದಲ್ಲಿ ಮಕ್ಕಳು ಅಧಿಕ ಸಂಖ್ಯೆಯಲ್ಲಿ ಮಾದಕ ವ್ಯಸನಿಗಳಾಗುತ್ತಿರಲಿಲ್ಲ. ಇದರ ವಿರುದ್ಧ ನಿಮ್ಮ ಕ್ರಮ ತಿಳಿಸಿ ಹಾಗು ಮಕ್ಕಳಿಗೆ ಮಾದಕ ವಸ್ತುಗಳು ಸಿಲುಕದಂತೆ ಎಂಥಹ ಕ್ರಮ ಕೈಗೊಳ್ಳುತ್ತೀರಿ?

(ಚಿನ್ಮಯ, ಭಾಗ್ಯ, ಸೋಮು, ರಾಘವೇಂದ್ರ ಮತ್ತು ವರ್ಷ)

**ಮುಖ್ಯಮಂತ್ರಿಗಳ ಉತ್ತರ:** ಮಾದಕ ವಸ್ತುಗಳ ಮಾರಾಟ ಹಳ್ಳಿಗಾಡಿನ ಪ್ರದೇಶಗಳಲ್ಲಿ ವರದಿಯಾಗಿಲ್ಲ, ಆದರೆ ಪಟ್ಟಣಗಳಲ್ಲಿ ಅದರಲ್ಲೂ ವಿಶೇಷವಾಗಿ ಬೆಂಗಳೂರು ನಗರದಲ್ಲಿ ಮಾದಕ ವಸ್ತುಗಳ ಮಾರಾಟ ಹೆಚ್ಚಿರುವುದು ನಮ್ಮ ಗಮನಕ್ಕೆ ಬಂದಿದೆ. ಮಾದಕ ವಸ್ತುಗಳ ಮಾರಾಟ ಜಾಲಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಲು ಪೊಲೀಸರಿಗೆ ಈಗಾಗಲೇ ನಾವು ಕಟ್ಟುನಿಟ್ಟಿನ ಆದೇಶ ನೀಡಿದ್ದೇವೆ. ಶಾಲಾ ಆವರಣದಲ್ಲಿ ಈ ರೀತಿಯ ಮಾರಾಟ ಕಂಡುಬಂದಲ್ಲಿ ಅಂತಹವರ ಮೇಲೆ ಕಾನೂನು ಕ್ರಮಗಳನ್ನು ಜರುಗಿಸುವ ಕೆಲಸವನ್ನೂ ಸಹ ಮಾಡುತ್ತಿದ್ದೇವೆ. ಮಾದಕ ವಸ್ತುಗಳು ಕೇವಲ ಆರೋಗ್ಯದ ಮೇಲೆ ಪರಿಣಾಮ ಬೀರುವುದಿಲ್ಲ, ಬದಲಾಗಿ ಇಡೀ ಸಮಾಜದ ಮೇಲೆ ದುಷ್ಪರಿಣಾಮ ಉಂಟುಮಾಡುತ್ತದೆ.

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರ ಉತ್ತರ:** ಪೋಷಕರಾದವರು ಮಕ್ಕಳಿಂದ ಮಾದಕ ವಸ್ತುಗಳನ್ನು ತರಿಸಿದರೆ ಅದು ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗುತ್ತದೆ. ಆದರೆ ಯಾವುದೇ ಮಕ್ಕಳು ಈ ರೀತಿ ಮಾಡಿದ ತನ್ನ ಪೋಷಕರ ವಿರುದ್ಧ ದೂರು ನೀಡುವುದಿಲ್ಲ. ಹಾಗೇನಾದರೂ ಮಕ್ಕಳು ದೂರು ನೀಡಿದರೆ ಅವರ ಪೋಷಕರಿಗೆ ಎಚ್ಚರಿಕೆ ನೀಡುವ ಕೆಲಸವನ್ನು ನಾವು ಮಾಡುತ್ತೇವೆ.

**ಪ್ರಶ್ನೆ-9:** ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಲು ಸರ್ಕಾರ ಮತ್ತು ವಿವಿಧ ಇಲಾಖೆಗಳು ಅನೇಕ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ಶಾಲೆಗಳಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸೈಕಲ್ ವಿತರಣೆ, ಪುಸ್ತಕ ಮತ್ತು ಸಮವಸ್ತ್ರ, ವಿದ್ಯಾರ್ಥಿ ವೇತನ, ರಿಯಾಯ್ತಿ ದರದಲ್ಲಿ ಬಸ್ ಪಾಸ್, ಮಕ್ಕಳ ರಕ್ಷಣೆಗಾಗಿ ಚೈಲ್ಡ್‌ಲೈನ್, ವಸತಿನಿಲಯಗಳು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಮಕ್ಕಳನ್ನು ಬಾಲಕಾರ್ಮಿಕರಾಗಿ ದುಡಿಸಿಕೊಳ್ಳುತ್ತಿರುವ ಮಾಲೀಕರಿಗೆ ಕಾನೂನಿನ ಅಡಿಯಲ್ಲಿ ಶಿಕ್ಷೆ ಮತ್ತು ದಂಡ ವಿಧಿಸುತ್ತಿರುವುದು ಸ್ವಾಗತಾರ್ಹವಾಗಿದೆ.

ಆದರೂ, ವಿಜಯಪುರ ಜಿಲ್ಲೆಯಲ್ಲಿ 58,417 ಬಾಲಕಾರ್ಮಿಕರಿದ್ದಾರೆ. ಕೇವಲ ಒಂದು ಜಿಲ್ಲೆಗೆ ಇಷ್ಟಾದರೆ 30 ಜಿಲ್ಲೆಗಳಿಗೆ ಎಷ್ಟಾಗಬಹುದು? ಅದರಂತೆ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಕೃಷಿವಲಯದಲ್ಲೂ ಮಕ್ಕಳನ್ನು ಬಾಲಕಾರ್ಮಿಕರನ್ನಾಗಿ ದುಡಿಸಿಕೊಳ್ಳುತ್ತಿದ್ದಾರೆ. ಇದನ್ನು ತಡೆಗಟ್ಟಲು ನಿಮ್ಮ ಸರ್ಕಾರ ಹೊಸದಾಗಿ ಹಮ್ಮಿಕೊಳ್ಳುತ್ತಿರುವ ಕಾರ್ಯಕ್ರಮ ಮತ್ತು ಯೋಜನೆಗಳೇನು?

(ಅಕ್ಷತಾ, ಸ್ವಾತಿ, ಉಷಾ, ಚಿನ್ಮಯ್ ಮತ್ತು ಭೀಮರಾಜ್)

**ಮುಖ್ಯಮಂತ್ರಿಗಳ ಉತ್ತರ:** ಗ್ರಾಮೀಣ ಪ್ರದೇಶದಲ್ಲಿ ತಂದೆತಾಯಿಗಳಿಗೆ ಕೃಷಿ, ಪಶುಸಂಗೋಪನೆ, ರೇಷ್ಮೆ ಮತ್ತು ತೋಟಗಾರಿಕೆ ಚಟುವಟಿಕೆಗಳಲ್ಲಿ ಮಕ್ಕಳು ಸಹಾಯ ಮಾಡಿದರೆ ಅದನ್ನು ಅಪರಾಧ ಎಂದು ಪರಿಗಣಿಸುವುದು ಕಷ್ಟದ ಕೆಲಸ. ಆದರೆ ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿ ಸಂಪಾದನೆಗಾಗಿ ಮಕ್ಕಳನ್ನು ದುಡಿಮೆಗೆ ಕಳುಹಿಸಿದರೆ ಅದು ಗಂಭೀರವಾದ ಅಪರಾಧ. ಆ ಕುರಿತು ಸರ್ಕಾರ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಬಾಲಕಾರ್ಮಿಕರ ಸಂಖ್ಯೆ ಕಡಿಮೆಯಾಗುತ್ತಿದೆ. ಆದರೆ ಅದನ್ನು ಸಂಪೂರ್ಣವಾಗಿ ತೊಡೆದುಹಾಕುವ ಪ್ರಯತ್ನಗಳು ನಡೆಯುತ್ತಿವೆ ಮತ್ತು ಬಾಲಕಾರ್ಮಿಕರ ವಯೋಮಿತಿಯನ್ನು 14 ವರ್ಷದಿಂದ 18 ವರ್ಷದವರೆಗೆ ಏರಿಸಲು ಸರ್ಕಾರ ಚಿಂತನೆ ನಡೆಸಿದೆ. ಒಟ್ಟಾರೆಯಾಗಿ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಯಾಗಬೇಕು, ಆ ಮಕ್ಕಳೂ ಶಿಕ್ಷಣ ಪಡೆಯುವಂತಾಗಬೇಕು ಮತ್ತು ಯಾವುದೇ ದೈಹಿಕ, ಮಾನಸಿಕ ದೌರ್ಜನ್ಯವಿಲ್ಲದೆ ಸದೃಢರಾಗಿ, ಆರೋಗ್ಯವಾಗಿ ಬೆಳೆಯಬೇಕು ಎಂಬುದು ಸರ್ಕಾರದ ಆಶಯವಾಗಿದೆ.

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರ ಉತ್ತರ:** ಪ್ರತಿ ಮೂರು ತಿಂಗಳಿಗೆ ಶಿಕ್ಷಣ, ಸಮಾಜ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಪೊಲೀಸ್ ಇಲಾಖೆ ಒಟ್ಟಾಗಿ ಬಾಲಕಾರ್ಮಿಕರನ್ನು ಪತ್ತೆಹಚ್ಚಿ, ಅವರ ಪೋಷಕರಿಗೆ ತಿಳುವಳಿಕೆ ಹೇಳಿ ಪುನರ್ವಸತಿ ಕಲ್ಪಿಸುವ ಕೆಲಸವನ್ನು ನಡೆಸುತ್ತಿದ್ದಾರೆ. ಬಾಲಮಂದಿರಗಳಲ್ಲೂ ಸಹ ಅಂತಹ ಮಕ್ಕಳನ್ನು ಇಟ್ಟುಕೊಂಡು ಪುನರ್ವಸತಿ ಕಲ್ಪಿಸುವ ಕೆಲಸವನ್ನು ಮಾಡುತ್ತಿದ್ದೇವೆ. ಈ ಕುರಿತು ಕುಟುಂಬದಲ್ಲೂ ಸಹ ಪರಿವರ್ತನೆ ತರುವ ಆವಶ್ಯಕತೆಯಿದೆ.







**ಪ್ರಶ್ನೆ-10:** ಹೆಚ್.ಐ.ವಿ. ಪೀಡಿತ ಮಕ್ಕಳಿಗೆ ಸರ್ಕಾರವು ಸ್ಕಾಲರ್‌ಶಿಪ್ ನೀಡುತ್ತಿದೆ ಮತ್ತು ಅವರ ಆರೋಗ್ಯ ಸುಧಾರಿಸಲು ಎ.ಆರ್.ಟಿ. ಕೇಂದ್ರಗಳನ್ನು ಸ್ಥಾಪಿಸಿದೆ.

ಆದರೂ ಸರ್ಕಾರದ ಸೌಲಭ್ಯಗಳು ಆ ಮಕ್ಕಳಿಗೆ ಸರಿಯಾಗಿ ದೊರೆಯುತ್ತಿಲ್ಲ. ಹೆಚ್.ಐ.ವಿ. ಪೀಡಿತ ಮಕ್ಕಳನ್ನು ಕೆಲವು ಶಾಲೆಗಳಲ್ಲಿ ಸೇರಿಸಿಕೊಳ್ಳುತ್ತಿಲ್ಲ. ಆ ಮಕ್ಕಳಿಗೆ ಎಲ್ಲಾ ಶಾಲೆಗಳಲ್ಲಿಯೂ ಮುಕ್ತ ಅವಕಾಶ ದೊರೆಯುವಂತೆ ಮಾಡಬೇಕು. ಅವರನ್ನು ಮುಖ್ಯವಾಹಿನಿಗೆ ತರಲು ಯಾವ ಕ್ರಮಕೈಗೊಳ್ಳುವಿರಿ?

(ಶಶಿಧರ್ ಆರ್. ಭಟ್ ಮತ್ತು ಜಯಶ್ರೀ)

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರ ಉತ್ತರ:** ಈಗಾಗಲೇ ಶಾಲೆಗಳಲ್ಲಿ ಹೆಚ್.ಐ.ವಿ. ಮಕ್ಕಳು ಶಾಲೆಗಳಿಗೆ ಹೋಗುತ್ತಿದ್ದಾರೆ, ಅವರ ಹೆಸರನ್ನು ಬಹಿರಂಗಪಡಿಸಲಾಗುವುದಿಲ್ಲ. ಆದರೆ ಇಂಥಹ ಮಕ್ಕಳಿಗೆ ತಂದೆತಾಯಿ ಇಲ್ಲದಿದ್ದಲ್ಲಿ ವಸತಿನಿಲಯಗಳಿಗೆ ಸೇರಿಸುವ ಕಾರ್ಯ ನಡೆಯುತ್ತಿದೆ. ಏಕ ಪೋಷಕರನ್ನು ಹೊಂದಿರುವ ಇಂತಹ ಮಕ್ಕಳಿಗೆ ಪ್ರತಿ ತಿಂಗಳು 750ರೂಗಳನ್ನು ನೀಡುವ ವ್ಯವಸ್ಥೆಯನ್ನೂ ಸಹ ಮಾಡಿದ್ದೇವೆ.

**ಪ್ರಶ್ನೆ-11:** ಕರ್ನಾಟಕ ಸರ್ಕಾರವು ಮಕ್ಕಳ ಆರೋಗ್ಯ ಅಭಿವೃದ್ಧಿ ದೃಷ್ಟಿಯಿಂದ ಪ್ರತಿ ಮೂರು ತಿಂಗಳಿಗೊಮ್ಮೆ ವೈದ್ಯರನ್ನು ಶಾಲೆಗೆ ಕಳುಹಿಸುವ ವ್ಯವಸ್ಥೆಯನ್ನು ಮಾಡಿಕೊಟ್ಟಿದೆ. ಅದೇ ರೀತಿಯಾಗಿ ಕೆಲವು ಜಿಲ್ಲೆಗಳಲ್ಲಿ ಸರ್ಕಾರದ ಆದೇಶದ ಪ್ರಕಾರ ವೈದ್ಯರು ಶಾಲೆಗೆ ಬರುತ್ತಿದ್ದಾರೆ ಎಂಬುವುದನ್ನು ಸ್ನೇಹಿತರಿಂದ ಕೇಳಿ ತಿಳಿದಿದ್ದೇವೆ. ಇದು ಸಂತೋಷಕರವಾದ ವಿಷಯವಾಗಿದೆ. ಅದಕ್ಕೆ ನಾವು ನಿಮ್ಮನ್ನು ಅಭಿನಂದಿಸುತ್ತಿದ್ದೇವೆ.

ಇಂತಹ ಅತ್ಯುತ್ತಮ ವ್ಯವಸ್ಥೆಯು ಎಲ್ಲಾ ಜಿಲ್ಲೆಗಳಲ್ಲಿ ಜಾರಿಯಾಗಬೇಕು. ನಮಗೆ ತಿಳಿದಿರುವಂತೆ ವಿಜಯಪುರ, ದಾವಣಗೆರೆ, ಬೆಂಗಳೂರು ನಗರ ಇವೇ ಮೊದಲಾದ ಜಿಲ್ಲೆಗಳಲ್ಲಿ ವೈದ್ಯರು ಮೂರು ತಿಂಗಳಿಗೊಮ್ಮೆ ತಪಾಸಣೆಗೆ ಬರುತ್ತಿಲ್ಲ. ಹೀಗೆ ಏಕೆ? ಈ ವ್ಯವಸ್ಥೆಯನ್ನು ಕಡ್ಡಾಯಗೊಳಿಸಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ. ಇದಕ್ಕೆ ಸರ್ಕಾರ ತೆಗದುಕೊಂಡಿರುವ ಕ್ರಮಗಳೇನು?

(ಬಸವರಾಜ್, ಕುಮಾರ್, ಹರೀಶ್ ಕುಮಾರ್ ಮತ್ತು ದೀಕ್ಷಾ).

**ಮುಖ್ಯಮಂತ್ರಿಗಳ ಉತ್ತರ:** ಶಾಲಾ ಮಕ್ಕಳ ಆರೋಗ್ಯ ತಪಾಸಣೆ ಮಾಡಿ ಅವರಿಗೆ ಬೇಕಾದಂಥಹ ಔಷಧೋಪಚಾರ ಮಾಡುವ ವ್ಯವಸ್ಥೆ ಜಾರಿಯಲ್ಲಿದೆ. ಆದರೆ ನೀವು ಕೆಲವೊಂದು ಕಡೆ ಇದು ಜಾರಿಯಲ್ಲಿಲ್ಲ ಎಂಬ ಮಾಹಿತಿ ನೀಡಿದ್ದೀರಿ. ಈ ಜಿಲ್ಲೆಗಳ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುತ್ತೇನೆ. ಶಿಕ್ಷಣದ ಜೊತೆಗೆ ಆರೋಗ್ಯವೂ ಅತಿ ಮುಖ್ಯ ಎನ್ನುವ ಕಾರಣಕ್ಕೆ ಇದನ್ನು ಎಲ್ಲಾ ಜಿಲ್ಲೆಗಳಲ್ಲೂ ಕಡ್ಡಾಯ ಮಾಡಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಮಾನಸಿಕವಾಗಿ ಮತ್ತು ದೈಹಿಕವಾಗಿ ಉತ್ತಮವಾಗಿದ್ದರೆ ಮಾತ್ರ ಉತ್ತಮ ಶಿಕ್ಷಣ ಪಡೆಯಲು ಸಾಧ್ಯ ಎಂದು ನಮ್ಮ ಸರ್ಕಾರ ನಂಬಿದೆ, ಹಾಗಾಗಿಯೇ ಶಾಲೆಗಳಲ್ಲಿ ಬಿಸಿಯೂಟ, ಹಾಲು ಮತ್ತು ಮಾತ್ರೆಗಳನ್ನು ವಿತರಿಸುತ್ತಿದೆ.

**ಪ್ರಶ್ನೆ-12:** ಅನಾಥ ಮಕ್ಕಳ ಪುನರ್ವಸತಿಗೆ ಅಲ್ಲಲ್ಲಿ ಅನಾಥಾಶ್ರಮಗಳ ವ್ಯವಸ್ಥೆಯಾಗಿದೆ. ಕಳೆದ ಎರಡು ವರ್ಷಗಳ ಹಿಂದೆ ಅನಾಥ ಮಕ್ಕಳಿಗೆ ಶಿಷ್ಯ ವೇತನ ನೀಡಲಾಗುತ್ತಿತ್ತು. ಅಂತಹ ಮಕ್ಕಳು ಆತಂಕವಿಲ್ಲದೆ ವಿದ್ಯಾಭ್ಯಾಸ ಮಾಡುತ್ತಿದ್ದರು.

ನಮ್ಮ ರಾಜ್ಯದಲ್ಲಿ ಎಲ್ಲ ಅನಾಥ ಮತ್ತು ಅರೆ ಅನಾಥ ಮಕ್ಕಳಿಗೆ ಆಶ್ರಯ ದೊರೆಯುತ್ತಿಲ್ಲ. ಉದಾ. ಹಾವೇರಿ ಜಿಲ್ಲೆಯಲ್ಲಿ ನನ್ನಂತಹ ಅನೇಕ ಮಕ್ಕಳಿಗೆ ಈ ಸೌಲಭ್ಯ ದೊರಕುತ್ತಿಲ್ಲ. ಆದ್ದರಿಂದ ಭಿಕ್ಷಾಟನೆಗೆ ಬಿದ್ದಿರುವ ಅನಾಥ ಮಕ್ಕಳಿಗೆ ಆಶ್ರಯ ಕೊಡಲು ಸರ್ಕಾರ ಹಾಕಿಕೊಂಡಿರುವ ಯೋಜನೆಗಳಾವುವು? ಮತ್ತು ಅನಾಥ ಮಕ್ಕಳಿಗೆ ಈ ಹಿಂದೆ ಕೊಡುತ್ತಿದ್ದ ಅನಾಥ ಮಕ್ಕಳ ಶಿಷ್ಯ ವೇತನ ನಿಲ್ಲಿಸಲು ಕಾರಣವೇನು?

(ಮಾನಸ, ಮಮತ ದ್ಯಾವಣ ಚೂರಿ)

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರ ಉತ್ತರ:** ಅನಾಥ ಮಕ್ಕಳ ಪುನರ್ವಸತಿಗೆ ಸಂಬಂಧಪಟ್ಟ ಕೆಲಸ ಮಾಡುತ್ತಿರುವ ಸರ್ಕಾರದಿಂದ ನೋಂದಣಿಯಾದ ಸಂಸ್ಥೆಗಳಿವೆ. ಜೊತೆಗೆ ನೋಂದಣಿಯಾಗದ ಸಂಸ್ಥೆಗಳೂ ಸಹ ಅನಧಿಕೃತವಾಗಿ ಮಕ್ಕಳನ್ನು ಇಟ್ಟುಕೊಳ್ಳುತ್ತಿವೆ. ಇಂತಹ ಸಂಸ್ಥೆಗಳಲ್ಲಿ ಮಕ್ಕಳ ಮೇಲೆ ದೌರ್ಜನ್ಯ ನಡೆಯುತ್ತಿರುವ ದೂರುಗಳು ಸರ್ಕಾರಕ್ಕೆ ಸಾಕಷ್ಟು ಬಂದಿವೆ. ಇದು ಅಂತರಾಷ್ಟ್ರೀಯ ಜಾಲಕ್ಕೆ ಸಂಬಂಧಿಸಿದ ವಿಚಾರವೂ ಹೌದು. ಇದು ನಮ್ಮ ಗಮನಕ್ಕೆ ಬಂದ ನಂತರ ನಾವು ಎಲ್ಲಾ ಜಿಲ್ಲಾಧಿಕಾರಿಗಳಿಗೆ, ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ, ನಮ್ಮ ಇಲಾಖೆಯ ಉಪನಿರ್ದೇಶಕರಿಗೆ ಎಲ್ಲಾ ಅನಾಥಾಶ್ರಮಗಳಿಗೆ ಭೇಟಿ ನೀಡಿ ಅವುಗಳ ನೋಂದಣಿ, ಅಲ್ಲಿರುವ ಮಕ್ಕಳ ಪರಿಸ್ಥಿತಿ, ಒದಗಿಸಿರುವ ಸೌಲಭ್ಯ ಇವೇ ಪರಿಶೀಲಿಸುವಂತೆ ಸೂಚಿಸಿದ್ದೇವೆ. ರಾಜ್ಯದ ಎಲ್ಲಾ ಅನಾಥಾಲಯಗಳು ನಮ್ಮ ಇಲಾಖೆಯ ಅಡಿಯಲ್ಲಿ ನೋಂದಣಿಯಾದಲ್ಲಿ ಮಾತ್ರ ಅವುಗಳ ಮೇಲೆ ನಿಯಂತ್ರಣ ಇಡಲು ಸಾಧ್ಯವಾಗುತ್ತದೆ. ನೋಂದಣಿಯಾದ ಸಂಸ್ಥೆಗಳಿಗೆ ಸರ್ಕಾರ ಒದಗಿಸುವ ಧನಸಹಾಯವನ್ನು ನೀಡಲಾಗುತ್ತಿದೆ.

**ಪ್ರಶ್ನೆ-13:** ಸರ್ಕಾರ ಮಕ್ಕಳಿಗೆ ಸಾರಿಗೆ ವ್ಯವಸ್ಥೆಯಲ್ಲಿ ರಿಯಾಯಿತಿ ಪಾಸುಗಳನ್ನು ವಿತರಿಸಿದೆ, ಕೆಲವು ಕಡೆ ಸಾರಿಗೆ ವ್ಯವಸ್ಥೆಯೂ ಸಮರ್ಪಕವಾಗಿದೆ ಮತ್ತು 8ನೇ ತರಗತಿಯ ವಿದ್ಯಾರ್ಥಿಗಳಿಗೆ ಉಚಿತ ಬೈಸಿಕಲ್ ವಿತರಿಸುತ್ತಿದೆ. ಇದರಿಂದ ಸಾವಿರಾರು ಮಕ್ಕಳಿಗೆ ಶಾಲೆಗೆ ಹೋಗಲು ಅನುಕೂಲವಾಗಿದೆ.

ಆದರೆ ಇನ್ನೂ ಹಲವಾರು ಕಡೆ ಮಕ್ಕಳು 4-5 ಕಿ.ಮಿ. ನಡೆದು ಶಾಲೆಗೆ ಹೋಗುತ್ತಿದ್ದಾರೆ. ಕರಾವಳಿ ಪ್ರದೇಶದಲ್ಲಿ ನದಿ ದಾಟಿ ಹೋಗುತ್ತಿದ್ದಾರೆ. ಅನೇಕ ಕಡೆ 5 ಹಳ್ಳಿಗೆ ಸೇರಿ ಒಂದೇ ಬಸ್ ಸಂಚರಿಸುತ್ತಿದೆ. ಬಸ್ ಪಾಸ್ ಇದ್ದರೂ ಸಹ ವಿದ್ಯಾರ್ಥಿಗಳನ್ನು ಬಸ್ಸಿಗೆ ಹತ್ತಿಸಿಕೊಳ್ಳುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಮಕ್ಕಳು ಅಪಾಯಕ್ಕೆ ಒಳಗಾಗುತ್ತಿದ್ದಾರೆ ಮತ್ತು ವಿಶೇಷವಾಗಿ ಹೆಣ್ಣುಮಕ್ಕಳು ಶಾಲೆ ತೊರೆಯುತ್ತಿದ್ದಾರೆ. ಈ ಕುರಿತು ನಿಮ್ಮ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ?

(ಪವಿತ್ರ ಮತ್ತು ಪ್ರಭು)

**ಮುಖ್ಯಮಂತ್ರಿಗಳ ಉತ್ತರ:** ಶಾಲಾ ಮಕ್ಕಳಿಗೆ ಬಸ್ ಪಾಸ್ ವ್ಯವಸ್ಥೆಯನ್ನು ಸರ್ಕಾರ ಮಾಡಿದೆ. ಆದರೆ ಕೆಲವೊಂದು ಕಡೆ ಬಸ್‌ಗಳಿಲ್ಲದೆ ಮಕ್ಕಳು ಅದರಲ್ಲೂ ವಿಶೇಷವಾಗಿ ಹೆಣ್ಣುಮಕ್ಕಳು ಶಾಲೆ ಬಿಡುತ್ತಿರುವುದನ್ನು ನೀವು ಪ್ರಸ್ತಾಪ ಮಾಡಿದ್ದೀರಿ, ಅಂತಹ ಕಡೆ ಬಸ್‌ಗಳ ವ್ಯವಸ್ಥೆ ಮಾಡಲಾಗುವುದು. ಇಂದು ಕೆ.ಎಸ್.ಆರ್.ಟಿ.ಸಿ. ನಷ್ಟದಲ್ಲಿದೆ, ಆದರೂ ಸಹ ಶಿಕ್ಷಣ ಎಲ್ಲಾ ಮಕ್ಕಳಿಗೂ ದೊರಕಬೇಕು ಎನ್ನುವ ಉದ್ದೇಶದಿಂದ ಸರ್ಕಾರ ಬಸ್ಸುಗಳನ್ನು ಎಲ್ಲಾ ಕಡೆಯಲ್ಲಿಯೂ ಓಡಿಸುತ್ತಿದ್ದೇವೆ. ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ ಹೆಚ್ಚಿನ ಬಸ್ಸುಗಳು ಸಂಚರಿಸುವಂತೆ ಮಾಡಲು ವ್ಯವಸ್ಥೆ ಮಾಡುತ್ತೇವೆ.

**ಪ್ರಶ್ನೆ- 14:** ರಾಜ್ಯದ ಎಲ್ಲಾ ಶಾಲೆಗಳಲ್ಲೂ ಶೌಚಾಲಯ ನಿರ್ಮಾಣಕ್ಕೆ ಕ್ರಮ ಕೈಗೊಂಡಿರುವುದು ಸಂತಸದ ವಿಷಯ.

ಆದರೆ, ಸಾರ್ವಜನಿಕ ಶೌಚಾಲಯಕ್ಕಿಂತ ಶಾಲೆಗಳಲ್ಲಿನ ಶೌಚಾಲಯಗಳ ನಿರ್ಮಾಣ ಮತ್ತು ನಿರ್ವಹಣೆ ಅನೇಕ ಕಡೆಗಳಲ್ಲಿ ಸರಿಯಿಲ್ಲದಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ಕೆಲವು ಶಾಲೆಗಳಲ್ಲಿ ಅಧಿಕಾರಿಗಳು ಬಂದಾಗ ಮಾತ್ರ ಶೌಚಾಲಯಗಳನ್ನು ತೆರೆಯುವುದು, ಶುಚಿಗೊಳಿಸುವುದು ಆಗುತ್ತಿದೆ. ಇನ್ನೂ ಅನೇಕ ಶಾಲೆಗಳಲ್ಲಿ ಶೌಚಾಲಯ ಇಲ್ಲದಿರುವುದು, ಇದರಿಂದ ಬಯಲು ಶೌಚಾಲಯಕ್ಕೆ ಹೋಗುವಾಗ ಅಪಘಾತಕ್ಕೀಡಾಗುವುದು, ಹಾವು ಕಚ್ಚಿ ಸಾವನ್ನಪ್ಪುವುದು ಇತ್ಯಾದಿ ವಿಷಯಗಳನ್ನು ಕೇಳಿರುತ್ತೇವೆ. ಇದರಿಂದ ಮುಂದೊಂದು ದಿನ ಅರಳಬೇಕಾದ ಮೊಗ್ಗು ಇಂದೇ ಬತ್ತಿಹೋಗುವಂತಾಗಿದೆ. ಇದರ ಬಗ್ಗೆ ಮಾನ್ಯರಾದ ತಾವು ಕೈಗೊಳ್ಳುವ ಕ್ರಮಗಳಾದರೂ ಏನು?

(ಸ್ಫೂರ್ತಿ, ಕೀರ್ತಿ, ಸಾಯಿಗೀತ)

**ಮುಖ್ಯಮಂತ್ರಿಗಳ ಉತ್ತರ:** ಶೌಚಾಲಯಗಳು ಪ್ರತಿಶತ ಶಾಲೆಗಳಲ್ಲಿದೆ ಎಂದು ನಾನು ಹೇಳುವುದಿಲ್ಲ. ಅನೇಕ ಕಡೆ ಶೌಚಾಲಯವಿದ್ದರೂ ಅದರ ನಿರ್ವಹಣೆ ಸರಿಯಿಲ್ಲದೆ ದುರಸ್ಥಿ ಮಾಡಬೇಕಾದ ಪರಿಸ್ಥಿತಿಯಿದೆ. ಈಗ ಎಲ್ಲಾ ಕಡೆ ಶೌಚಾಲಯ ಇರಲೇಬೇಕು ಮತ್ತು ಅದರ ನಿರ್ವಹಣೆಯನ್ನು ಸರಿಯಾಗಿ ಮಾಡಲೇಬೇಕೆಂದು ಸರ್ಕಾರ ಆಲೋಚಿಸುತ್ತಿದೆ. 2018ರೊಳಗೆ ಇಡೀ ರಾಜ್ಯವನ್ನು ಬಯಲು ಬಹಿರ್ದೆಶೆ ಮುಕ್ತ ರಾಜ್ಯವನ್ನಾಗಿ ಮಾಡುವ ಉದ್ದೇಶ ಸರ್ಕಾರಕ್ಕಿದೆ. ಆ ನಿಟ್ಟಿನಲ್ಲಿ ನಾವು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದೇವೆ.



